ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4454

ಮಾನ್ಯ ಸದಸ್ಯರ ಹೆಸರು : ಶ್ರೀ ಯೋಗೀಶ್‌ಭಟ್ ಎನ್.
(ಮಂಗಳೂರು)

ಉತ್ತರಿಸುವ ದಿನಾಂಕ : 11–7–2005

ಉತ್ತರಿಸುವ ಸಚಿವರು : ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಗಳ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು (ಮಾನ್ಯ ಲೋಕೋಪಯೋಗಿ ಹಾಗೂ ಇಚಿಧನ ಸಚಿವರ ಪರವಾಗಿ)

	ಪ್ರಶ್ನೆ	ಉತ್ತರ
ಅ	2003–04, 2004–05 ನೇ ಸಾಲಿಗೆ ವಿದ್ಯುತ್ ಪ್ರಸರಣ ನಿಗಮಕ್ಕೆ ಸರ್ಕಾರ ನೀಡಿದ್ದ ಸಬ್ಸಿಡಿ ಹಣ ಎಷ್ಟು; ಇದರಲ್ಲಿ ನ'ಗ'ದ'ಾ ಹಾ ಗ'ೂ ಹೊಂದಾಣಿಕೆಯ ಹಣವೆಷ್ಟು;	ಅ) ಸರ್ಕಾರವು ನಿಗಮಕ್ಕೆ 2003–04 ಮತ್ತು 2004–05 ನೇ ಸಾಲಿನಲ್ಲಿ ಕ್ರಮವಾಗಿ ರೂ. 1623.29 ಮತ್ತು ರೂ. 1650.00 ಕೋಟಿ ಗಳ ಸಹಾಯಧನವನ್ನು ನೀಡಬೇಕಾಗಿದ್ದು, ಈ ಪೈಕಿ ನೀಡಿದ ಸಹಾಯಧನದ ವಿವರ ಈ ಕೆಳಕಂಡಂತಿದೆ. ನೀಡಿದ ಸಹಾಯಧನ ವರ್ಷ | ನಗದು | ಹೊಂದಾಣಿಕೆ | ಒಟ್ಟು 2003–04 | 1062.00 | 493.46 | 1555.46 2004–05 | 935.00 | 262.17 | 1297.17
ಆ	ಈ ಹಣವನ್ನು ಯಾವ ಉದ್ದೇಶಕ್ಕೆ ನೀಡಲಾಗಿದೆ ಮತ್ತು ನೀಡಿದ ಉದ್ದೇಶಕ್ಕೆ ಇದನ್ನು ಉಪಯೋಗಿಸ ಲಾಗಿದೆಯೇ ವಿವರ ಒದಗಿಸುವುದು.	ಆ) ನೀರಾವರಿ ಪಂಪುಸೆಟ್‌ಗಳ ಗ್ರಾಹಕರಿಗೆ, ಮತ್ತು ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡಿದ್ದರಿಂದ ನಿಗಮಕ್ಕೆ ಉಂಟಾದ ನಷ್ಟವನ್ನು ಭರಿಸಲು ಸರ್ಕಾರವು ಸಹಾಯಧನವನ್ನು ನೀಡುತ್ತದೆ.

ಇ	2001–02 ರಿಂದ 2004–05ನೇ ಸಾಲಿನಲ್ಲಿ ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟ ಎಷ್ಟು; ಈ ನಷ್ಟವನ್ನು ತಗ್ಗಿಸಲು ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು;	ಇ) 2001–02 ರಿಂದ 2004–05ರ ಸಾಲಿನಲ್ಲಿ ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟದ ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ವರ್ಷ	ಶೇಕಡಾವಾರು ಪ್ರಸರಣ ಮತ್ತು ವಿತರಣ ನಷ್ಟ
1	2001–02	35.86
2	2002–03	31.95
3	2003–04	30.88
4	2004–05	29.27 (ತಾತ್ಕಾಲಿಕ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ನಿದ್ಯುತ್ ಪ್ರಸರಣ ನಷ್ಟವನ್ನು ತಗ್ಗಿಸಲು ಕಾಮಗಾರಿ ಯೋಜನೆಗಳಿಗೆ ಪ್ರತಿ ವರ್ಷ ಸರಾಸರಿ ಸುಮಾರು ರೂ. 500,00 ಕೋಟಿಗಳನ್ನು ಖರ್ಚು ಮಾಡುತ್ತಿದೆ. ವಿದ್ಯುತ್ ಪ್ರಸರಣ ಮತ್ತು ವಿತರಣ ನಷ್ಟವನ್ನು ತಗ್ಗಿಸಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ :–

1. ವೋಲ್ಟೇಜ್ ಸಮಸ್ಯೆ ಇರುವ ಪ್ರದೇಶಗಳಲ್ಲಿ ವೋಲ್ಟೇಜ್ ಸುಧಾರಿಸಲು ಹೊಸ ಸಬ್–ಸ್ಟೇಷನ್‌ಗಳನ್ನು ನಿರ್ಮಾಣ ಮಾಡುವುದು ಹಾಗೂ ಅಧಿಕ ಹೊರೆ ಇರುವ ಹಾಲಿ ಸಬ್–ಸ್ಟೇಷನ್‌ಗಳ ಬಲವರ್ಧನೆ.
2. ಹೊಸ ಪ್ರಸರಣ ಮಾರ್ಗಗಳ ನಿರ್ಮಾಣ.
3. ವೋಲ್ಟೇಜ್ ಮತ್ತು ಪವರ್ ಫ್ಯಾಕ್ಟರ್ ಸುಧಾರಿಸಲು ಸಬ್–ಸ್ಟೇಷನ್‌ಗಳಲ್ಲಿ ಮತ್ತು 11 ಕೆ.ವಿ. ,ೀಡರ್‌ಗಳಿಗೆ ಕೆಪಾಸಿಟರ್ ಬ್ಯಾಂಕ್ ಗಳ ಅಳವಡಿಕೆ.
4. 11 ಕೆ.ವಿ. ಎಕ್ಸ್‌ಪ್ರೆಸ್ ,ೀಡರ್‌ಗಳ ಮತ್ತು 11 ಕೆ.ವಿ, ಲಿಂಕ್ ಲೈನ್‌ಗಳ ನಿರ್ಮಾಣ, ಕಡಿಮೆ ಗಾತ್ರದ ವಿದ್ಯುತ್ ವಾಹಕಗಳನ್ನು ಹೆಚ್ಚಿನ ಗಾತ್ರದ

		ವಿದ್ಯುತ್ ವಾಹಕಗಳ ಮೂಲಕ ಬದಲಾಯಿಸುವುದು. 5. ತ್ವರಿತ ವಿದ್ಯುತ್ ಅಭಿವೃದ್ಧಿ ಸುಧಾರಣಾ ಯೋಜನೆ (ಎ. .ಡಿ.ಆರ್.) ಯಡಿಯಲ್ಲಿ ಸರ್ಕಾರವು ರೂ. 116.19 ಕೋಟಿಗಳನ್ನು ಮಂಜೂರು ಮಾಡಿದ್ದು, ಈತನಕ ವಿದ್ಯುತ್ ಸರಬರಾಜು ಕಂಪನಿಗಳು ರೂ. 706.88 ಕೋಟಿಗಳನ್ನು ಖರ್ಚು ಮಾಡಿದ್ದು, ರೂ 878.87 ಕೋಟಿಗಳ ಯೋಜನೆಗಳು ಪ್ರಗತಿ ಯಲ್ಲಿವೆ. 6. ,ೀಡರ್‌ವಾರು ಮತ್ತು ವಿತರಣಾ ಪರಿವರ್ತಕ ಕೇಂದ್ರವಾರು ಎನರ್ಜಿ ಆಡಿಟ್ ಮಾಡಿ ಅಧಿಕ ನಷ್ಟವಿರುವ ಪ್ರದೇಶದಲ್ಲಿ ವಿದ್ಯುತ್ ಕಳ್ಳತನ, ವಿದ್ಯುತ್ ದುರುಪಯೋಗ ಪ್ರಕರಣಗಳನ್ನು ಪತ್ತೆ ಮಾಡುವುದು, ಕೆಟ್ಟುಹೋದ ಮೀಟರುಗಳನ್ನು ಹೊಸ ಮೀಟರುಗಳಿಂದ ಬದಲಾಯಿಸುವುದು, ಅಧಿಕ ಮಾರ್ಗಗಳನ್ನು ಎಳೆಯುವ ಮೂಲಕ ಹೆಚ್ಚಿನ ಒತ್ತಡವನ್ನು ಕಡಿಮೆ ಮಾಡುವುದರ ಮೂಲಕ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು. 7. ಹೆಚ್.ಟಿ. ಹಾಗೂ ಎಲ್.ಟಿ. ಪ್ರಮಾಣದ ಅಂತರವನ್ನು ಕಡಿಮೆ ಮಾಡಲು ಹೆಚ್.ಟಿ. ವಿತರಣ ಮಾರ್ಗಗಳನ್ನು ಹೆಚ್ಚಿಸುವುದು. 8. ಮೀಟರ್ ಅಳವಡಿಸದ ಪ್ರವರ್ಗಕ್ಕೆ ಮೀಟರು ಗಳನ್ನು ಅಳವಡಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 405 (4454)

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಯೋಗೀಶ್ ಭಟ್ :– ಮಾನ್ಯ ಅಧ್ಯಕ್ಷರೆ, 2003–2004ನೇ ಸಾಲಿನಲ್ಲಿ 67.83 ಕೋಟಿ ರೂಪಾಯಿಗಳು ಮತ್ತು 2004–2005ನೇ ಸಾಲಿನಲ್ಲಿ 352.83 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿಲ್ಲ. ಯಾವ ಕಾರಣಕ್ಕೋಸ್ಕರ ಈ ಹಣವನ್ನು ಖರ್ಚು ಮಾಡಿಲ್ಲ? ಮತ್ತೆ ಪಂಪ್‌ಸೆಟ್ ಗ್ರಾಹಕರಿಗೆ ಎಷ್ಟು ಯೂನಿಟ್ ವಿದ್ಯುತ್‌ನ್ನು ತಾವು ಕೊಡುತ್ತಿದ್ದೀರಿ? ಮತ್ತು ಭಾಗ್ಯ ಜ್ಯೋತಿ ಹಾಗೂ ಕುಟೀರ ಜ್ಯೋತಿಗೋಸ್ಕರ ಎಷ್ಟು ಯೂನಿಟ್ ವಿದ್ಯುತ್ ಕೊಡಲಾಗುತ್ತಿದೆ? ಹಾಗೆಯೇ ಇದಕ್ಕಾಗಿ ಎಷ್ಟು ಸಹಾಯಧನ ಮತ್ತು ಇದಕ್ಕೆ ಎಷ್ಟು ಪರಿಹಾರಧನ ಕೊಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ .ಜಿ.ಆರ್. ಸಿಂಧ್ಯಾ: (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ):–

ಮಾನ್ಯ ಅಧ್ಯಕ್ಷರೆ, ಸರ್ಕಾರ 2003–2004ನೇ ಸಾಲಿನಲ್ಲಿ 1555.46 ಕೋಟಿ ರೂಪಾಯಿಗಳಷ್ಟು ಹಣವನ್ನು ಸಬ್ಸಿಡಿ ರೂಪದಲ್ಲಿ ಕೊಟ್ಟಿದೆ. ಮತ್ತೆ 2004–05ನೇ ಸಾಲಿನಲ್ಲಿ ಸುಮಾರು 1297.17ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಹಣ ಬಿಡುಗಡೆ ಮಾಡಿದ್ದಾರೆ. ಆದರೆ, ತಾವು ಈಗ ಏನು ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಬಗ್ಗೆ ಪ್ರಶ್ನೆ ಕೇಳಿದ್ದೀರಿ, ಇದರ ಬಗ್ಗೆ ನನ್ನ ಹತ್ತಿರ ಅಂಕಿ–ಅಂಶಗಳು ಇಲ್ಲ. ಇದನ್ನು ತಮಗೆ ಪ್ರತ್ಯೇಕವಾಗಿ ಒದಗಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್:– ಮಾನ್ಯ ಅಧ್ಯಕ್ಷರೆ, ನಾನು ಏಕೆ ಈ ಪ್ರಶ್ನೆಯನ್ನು ಕೇಳಿದ್ದೇನೆಂದರೆ, ಇವರು 67.83ಕೋಟಿ ರೂಪಾಯಿ ಮತ್ತು 352.83ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿಲ್ಲ. ಯಾವ ಕಾರಣಕ್ಕಾಗಿ ಖರ್ಚು ಮಾಡಿಲ್ಲವೆಂದು ಹೇಳಿಲ್ಲ. ಎರಡನೆಯದಾಗಿ, ಹಿಂದೆ ಎನ್.ಡಿ.ಎ. ಸರ್ಕಾರ ಇದ್ದಾಗ ಅಂದರೆ ಸುಮಾರು ಎರಡುವರೆ ವರ್ಷಗಳ ಹಿಂದೆ ಎ. .ಡಿ.ಆರ್. . ಯೋಜನೆ ಅಡಿಯಲ್ಲಿ 1161.19ಕೋಟಿ ರೂಪಾಯಿಗಳಷ್ಟು ಮಂಜೂರು ಆಗಿತ್ತು. ಎರಡೂವರೆ ವರ್ಷಗಳ ನಂತರ ಇದರ ಪರ್ಫಾರ್‌ಮೆನ್ಸ್ ಕೇವಲ 50 ಪರ್ಸೆಂಟ್ ಮಾತ್ರ ಆಗಿದೆ. ಈ ನಿಟ್ಟಿನಲ್ಲಿ ಕನಿಷ್ಠ ವೋಲ್ಟೇಜ್ ಸಮಸ್ಯೆ ಅಥವಾ ಇತರೇ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಮಾಡತಕ್ಕಂಥ ನಿಟ್ಟಿನಲ್ಲಿ ಸದರಿ ಕಾಮಗಾರಿಗಳನ್ನು ಐದಾರು ತಿಂಗಳಲ್ಲಿ ಮುಗಿಸುವುಂಥದಕ್ಕೆ

ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ, ಎ. .ಡಿ.ಆರ್. . ಯೋಜನೆಗೆ ಸಂಬಂಧಪಟ್ಟಂತೆ ಇನ್ನು ಆರು ತಿಂಗಳಲ್ಲಿ 50 ಪರ್ಸೆಂಟ್ ಕಾಮಗಾರಿಗಳನ್ನು ಪೂರ್ತಿಗೊಳಿಸಬೇಕೆಂಬುದು ನನ್ನ ಪ್ರಶ್ನೆಯಾಗಿದೆ. ಮತ್ತೆ ಎರಡನೆಯದಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂರಲ್ , ೀಡರ್ ವ್ಯವಸ್ಥೆ ಇದ್ದು, ಇದನ್ನು ಅರ್ಬನ್ , ೀಡರ್ ನಿಟ್ಟಿನಲ್ಲಿ ಮಾಡಬೇಕು ಎನ್ನುತಕ್ಕಂಥದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಇಲ್ಲದಿದ್ದರೆ 3 ಫೇಸ್‌ನಲ್ಲಿ ಕರೆಂಟು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ 3 ಫೇಸ್‌ನ ಮೂಲಕ ಕರೆಂಟ್ ಕೊಡತಕ್ಕಂಥ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಅರ್ಬನ್ , ೀಡರ್ ಆಗಿ ಪರಿವರ್ತನೆ ಮಾಡುತ್ತೀರಾ?

ಶ್ರೀ .ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೆ, ಈಗ ಎಲ್ಲಾ ರೂರಲ್ , ೀಡರ್‌ಗಳನ್ನು ಅರ್ಬನ್ , ೀಡರ್ ಆಗಿ ಬದಲಾವಣೆ ಮಾಡುವುದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ ಎನ್ನುತಕ್ಕಂಥದು ಮಾನ್ಯ ಗೌರವಾನ್ವಿತ ಸದಸ್ಯರಿಗೂ ಕೂಡ ಗೊತ್ತಿದೆ. ಆದರೆ. depending on the consumption and also demand ಈಗ ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:– ಈಗ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳು:–

ಶ್ರೀ .ಜಿ.ಆರ್. ಸಿಂಧ್ಯಾ (ಬೃಹತ್ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ 11.03.2005ರ 27ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 217 ಪ್ರಶ್ನೆಗಳ ಪೈಕಿ 154 ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

ಅಧ್ಯಕ್ಷರು:– ಈಗ ಶೂನ್ಯ ವೇಳೆ. ಮಾನ್ಯ ರಮೇಶ್ ಕುಮಾರ್‌ರವರು ಮತ್ತು ಮಾನ್ಯ ಮಾಧುಸ್ವಾಮಿಯವರು ಶೂನ್ಯ ವೇಳೆಯಲ್ಲಿ ಒಂದು ವಿಷಯ ಪ್ರಸ್ತಾಪ ಮಾಡಲು ನನಗೆ ಪತ್ರ ಕೊಟ್ಟಿದ್ದಾರೆ. ಮೊದಲಿಗೆ ಅವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಹೈಕೋರ್ಟ್ ಸರ್ಕ್ಯೂಟ್ ಹೌಸ್ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ನಾನು ತಮಗೆ ಪತ್ರ ಕಳುಹಿಸಿ ಕೊಟ್ಟಿದ್ದೇನೆ. ಆದ್ದರಿಂದ ನನಗೆ ಅವಕಾಶ ಕೊಡಿ.